1	2	3	4
23.	ಗುಲ್ಬರ್ಗಾ	ನಾರಾಯಣಪುರ ತೋಟಗಾರಿಕೆ ಕ್ಷೇತ್ರ	ಸುರಪುರ
24.	ಬಳ್ಳಾರಿ	ತೋರಣಗಲ್ ತೋಟಗಾರಿಕೆ ಕ್ಷೇತ್ರ	ಬಳ್ಳಾರಿ
25.	ರಾಯಚೂರು	ಮಾನ್ವಿ ತೋಟಗಾರಿಕೆ ಕ್ಷೇತ್ರ	ಮಾನ್ವಿ
26.	ಕೊಪ್ಪಳ	ಗಿಣಿಗೆರಾ ತೋಟಗಾರಿಕೆ ಕ್ಷೇತ್ರ	ಕೊಪ್ಪಳ
27.	ಬೀದರ್	ಹಳ್ಳದಕೇರಿ ತೋಟಗಾರಿಕೆ ಕ್ಷೇತ್ರ	ಬೀದರ್

ಧಾರವಾಡ ನಗರ ಕ್ಷೇತ್ರ ಗ್ರಾಮಗಳಿಂದ ಹೊಲಗಳಿಗೆ ಹೋಗಲು ಗ್ರಾಮದಿಂದ ಗ್ರಾಮ ಜೋಡಿಸುವ ರಸ್ತೆ ಕಾಮಗಾರಿ

3167 (3952) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ನಗರ ಕ್ಷೇತ್ರ ಗ್ರಾಮಗಳಿಂದ ರೈತರು ಹೊರ ಹೊಲಗಳಿಗೆ ಹೋಗಲು ಗ್ರಾಮದಿಂದ ಗ್ರಾಮ ಜೋಡಿಸುವ ರಸ್ತೆ ಕಾಮಗಾರಿಗಳನ್ನು ಧಾರವಾಡ ಮತ್ತು ಹುಬ್ಬಳ್ಳಿ ಎಪಿಎಂಸಿ. ನಿಧಿಯಿಂದ ಯಾವ ಯಾವ ರಸ್ತೆಗಳನ್ನು ಮಾಡಲಾಗಿದೆ; ಕೆಲಸಗಳ ವಿವರ ಮತ್ತು ಖರ್ಚಾದ ಹಣದ ವಿವರವಾದ ಮಾಹಿತಿ ನೀಡುವುದು;

ಆ) ಸದರಿ ರಸ್ತೆಗಳ ನಿರ್ಮಾಣ ಯಾವ ಅವಧಿಯಲ್ಲಿ ಮಾಡಲಾಗಿದೆ; ಹಾಗೂ ಈವರೆಗೆ ಅವುಗಳ ನಿರ್ವಹಣೆಯ ಕೆಲಸ ಸರ್ಕಾರದಿಂದ ನಡೆದಿದೆಯೇ; ವಿವರ ನೀಡುವುದು;

ಇ) ಈ ರಸ್ತೆಗಳು ಉಪಯೋಗಿಸಲು ಯೋಗ್ಯವಾಗಿದೆಯೇ; ಅವುಗಳ ನಿರ್ವಹಣೆಯ (ಮೈಂಟೆನೆನ್ಸ್) ಕಾರ್ಯಗಳು ಯಾರು ಮಾಡಬೇಕು; ವಿವರ ನೀಡುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ರೂ. ಲಕ್ಷಗಳಲ್ಲಿ

1. ಧಾರವಾಡ ಸಮಿತಿಯಿಂದ ಅಭಿವೃದ್ಧಿ ಪಡಿಸಿದ ರಸ್ತೆಗಳ ವಿವರ.

ಕ್ರ. ಸಂ.	ರಸ್ತೆಯ ಹೆಸರು	ಉದ್ದ ಕಿ.ಮೀ	ಖರ್ಚಾದ ಹಣ
1.	ಹುಲಿಕೇರಿ ಕಡಬಗಟ್ಟಿ ರಸ್ತೆ ಖಡೀಕರಣ ಹಾಗೂ ಡಾಂಬರೀಕರಣ.	5	3.57
2.	ಉಪ್ಪಿನ ಭೆಟಗೇರಿ ಕಲ್ಲೇ ವಯಾ ಹನುಮನಾಳ ರಸ್ತೆ ಖಡೀಕರಣ.	5	3.61
3.	ನರೇಂದ್ರ ಉಪ್ಪಿನ ಭೆಟಗೇರಿ ವಯಾಯಾದವಾಡ ಶಿಬಾರಗಟ್ಟಿ ರಸ್ತೆ ಖಡೀಕರಣ ಹಾಗೂ ಡಾಂಬರೀಕರಣ.	12	7.95
4.	ಧಾರವಾಡದಿಂದ ಹೆಬಸೂರು ರಸ್ತೆಗೆ ಕೂಡು ರಸ್ತೆ ನಿರ್ಮಾಣ.	2	4.61
5.	ನವಲೂರಿನಿಂದ ಸುಳ್ಳ ರಸ್ತೆ ವಯಾ ಸೋಮಾಪುರ ಖಡೀಕರಣ ಮಾಡುವುದು.	5	4.01

6.	ಕಮಲಾಪುರದಿಂದ ಧಾರವಾಡ ಸವದತ್ತಿ ಕೂಡು ರಸ್ತೆ ಖಡೀಕರಣ ಮಾಡುವುದು.	2	5.71

2. ಹುಬ್ಬಳ್ಳಿ ಸಮಿತಿಯಿಂದ ಅಭಿವೃದ್ಧಿಪಡಿಸಿದ ರಸ್ತೆಯ ವಿವರ

1.	ಗಾಮನಗಟ್ಟಿ–ಅಮರಗೋಳ ಕವಲಗೇರಿ ರಸ್ತೆ ನಿರ್ಮಾಣ ಮತ್ತು ಖಡೀಕರಣ.	1.5	5.12
2.	ಗಾಮನಗಟ್ಟಿ–ಅಮರಗೋಳ ಕವಲಗೇರಿ ರಸ್ತೆ ಮತ್ತು ಸಿ.ಡಿ. ನಿರ್ಮಾಣ	2.10	5.29
3.	ಅಮರಗೋಳ–ನವಲೂರು ರಸ್ತೆ (ಕಚ್ಚಾ ಗಟಾರು ಮತ್ತು ರಸ್ತೆ ಏರಿ ನಿರ್ಮಾಣ.)	2	0.87
4.	ಅಮರಗೋಳ ಗ್ರಾಮದಿಂದ ಕಲ್ಲು ಹೊಲದ ರಸ್ತೆ (ರಸ್ತೆ ಏರಿ ಮತ್ತು ಮುರ್ರಂ ಹೊದಿಕೆ)	1.60	4.18

1. ಧಾರವಾಡ ಸಮಿತಿ – 1995–95ನೇ ಸಾಲಿನಲ್ಲಿ ನಿರ್ಮಿಸಿ, ಜಿಲ್ಲಾ ಪಂಚಾಯತ್ ಇವರಿಗೆ ವಹಿಸಿಕೊಡಲಾಗಿದೆ.

2. ಹುಬ್ಬಳ್ಳಿ ಸಮಿತಿ – 1995–96, 1996–97ನೇ ಸಾಲಿನಲ್ಲಿ (ಕ್ರ.ಸಂ.1,2,3) ಕೈಗೊಂಡ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಇವರಿಗೆ ವಹಿಸಿಕೊಡಲಾಗಿದೆ. ಕ್ರ.ಸಂ.4ರಲ್ಲಿನ ಕಾಮಗಾರಿ 2002–03ನೇ ಸಾಲಿನಲ್ಲಿ ಪೂರ್ಣಗೊಳಿಸಿದ್ದು, ನಿರ್ವಹಣೆಯನ್ನು ಸಮಿತಿಯು ನಿರ್ವಹಿಸುತ್ತದೆ.

1. ಧಾರವಾಡ ಸಮಿತಿ – ಜಿಲ್ಲಾ ಪಂಚಾಯತ್‌ಗೆ ವಹಿಸಿಕೊಟ್ಟಿದ್ದು, ಸದರಿಯವರು ನಿರ್ವಹಣೆ ಮಾಡಬೇಕಿರುತ್ತದೆ.

2. ಹುಬ್ಬಳ್ಳಿ ಸಮಿತಿ – ಕ್ರ.ಸಂ. 1,2,3 ರಲ್ಲಿನ ರಸ್ತೆ ಜಿಲ್ಲಾ ಪಂಚಾಯತ್‌ಗೆ ವಹಿಸಿಕೊಟ್ಟಿದ್ದು, ಸದರಿಯವರು ನಿರ್ವಹಣೆ ಮಾಡಬೇಕಿರುತ್ತದೆ. ಕ್ರ.ಸಂ.4ರಲ್ಲಿನ ರಸ್ತೆ ನಿರ್ವಹಣೆಯನ್ನು ಸಮಿತಿ ಮಾಡುತ್ತದೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ರೈತರ ಬೆಳೆ ವಿಮಾ ಯೋಜನೆ ಜಾರಿ

3168 (3666) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಬೆಳೆ ವಿಮೆ ಯೋಜನೆಯಡಿಯಲ್ಲಿ ವಿಮೆ ಮಾಡಿಸಿದ ರೈತರ ಸಂಖ್ಯೆ ಎಷ್ಟು ಈ ಯೋಜನೆಯಡಿಯಲ್ಲಿ ಸಂಗ್ರಹವಾದ ಪ್ರೀಮಿಯಂ ಹಣದ ಮೊತ್ತವೆಷ್ಟು; ಹಾಗೂ ಬೆಳೆ ವಿಮೆ ಮಂಜೂರಾದ ಪ್ರಕರಣ ಹಾಗೂ ಬಿಡುಗಡೆಯಾದ ವಿಮೆ ಮೊತ್ತವೆಷ್ಟು;

ಆ) ಶಿವಮೊಗ್ಗ ತಾಲ್ಲೂಕಿಗೆ ಸಂಬಂಧಿಸಿದಂತೆ, ಬೆಳೆ ವಿಮೆ ಯೋಜಯೋಜನೆಯಡಿ ಭ್ರಷ್ಟಾಚಾರ ಪ್ರಕರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ವಿವರ ಒದಗಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) 2002ರ ಮುಂಗಾರು ಹಂಗಾಮಿನಲ್ಲಿ ಭಾರತೀಯ ಸಾಮಾನ್ಯ ವಿಮಾ ನಿಗಮವು 9 ಬೆಳೆಗಳಾದ ರಾಗಿ, ಜೋಳ, ಸಜ್ಜೆ, ತೊಗರಿ, ಸೋಯಾ ಅವರೆ, ಉದ್ದು, ಹೆಸರು, ಸೂರ್ಯಕಾಂತಿ